## ಈ ಲೇಖನದ ವಿಷಯಾನುಕ್ರಮಣಿಕೆ


ಶ್ರೀಮದಾಚಾರ್ಯರು ಕಲಿಸಿದ ಬದುಕಿನ ಪಾಠ 2

ತತ್ವಗಳನ್ನು ನಿರ್ಣಯಿಸಲು ಆಚಾರ್ಯರು ತೋರಿಸಿದ ನಿರ್ದುಷ್ಟ ಮಾರ್ಗ 4

ಯಶಸ್ಸಿನ ಮೂರು ಮೂಲಮಂತ್ರಗಳನ್ನು ಹೇಳಿಕೊಟ್ಟ ಆಚಾರ್ಯರು 7

ಕೌಟುಂಬಿಕ ನೆಮ್ಮದಿಗೆ ಶ್ರೀಮದಾಚಾರ್ಯರ ನಾಲ್ಕು ಸೂತ್ರಗಳು 11

## ಶ್ರೀಮದಾಚಾರ್ಯರು ಕಲಿಸಿದ ಬದುಕಿನ ಪಾಠ

ಅತ್ಯಂತಸಂಕ್ಷಿಪ್ತವಾದ ಶಬ್ದಗಳಲ್ಲಿ ಶಾಸ್ತ್ರಾರ್ಥವನ್ನು ತಿಳಿಸುವ ಆಚಾರ್ಯರು ಎಂದೇ ದರ್ಶನಪ್ರಪಂಚದಲ್ಲಿ ಪ್ರಸಿದ್ಧರಾದವರು ಶ್ರೀಮನ್ ಮಧ್ವಾಚಾರ್ಯರು. ಸಮಸ್ತ ಶಾಸ್ತ್ರಗಳ ಆದೇಶವನ್ನು ಒಂದೇ ಸಾಲಿನನಲ್ಲಿ ಅವರು ಸಂಗ್ರಹಿಸಿರುವ ರೀತಿ ಹೀಗಿದೆ –

**"ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಮ್"**

"ನಿಮ್ಮ ಪಾಲಿನ ಕರ್ತವ್ಯವನ್ನು ಭಗವಂತನ ಪೂಜೆ ಎಂದು ಭಕ್ತಿಯಿಂದ ಮಾಡಿ,
ಆ ಭಗವಂತ ಅನುಗ್ರಹಿಸುವ ಪರಿಪೂರ್ಣ ಸೌಭಾಗ್ಯವನ್ನು
ವಿನಯ-ಸಂತೋಷಗಳಿಂದ ಅನುಭವಿಸಿ"

“ದೇವರೊಬ್ಬನೇ ನಾಮ ಹಲವು”,

“ವೇದಸಿದ್ಧಾಂತದ ಪ್ರಕಾರ ಸಾವಿರಾರು ದೇವರಿಲ್ಲ, ದೇವರು ಒಬ್ಬನೇ, ಉಳಿದ ಚೇತನರೆಲ್ಲ ಆ ಮಹಾಚೇತನನ ಪ್ರತಿಬಿಂಬರು”

“ದೇವರು ಯಾರೊಬ್ಬರ ಆಸ್ತಿಯೂ ಅಲ್ಲ, ಅವನು ಪ್ರತಿಯೊಬ್ಬರ ಆಸ್ತಿ, ಪ್ರತಿಯೊಬ್ಬರ ಅಂತರ್ಯಾಮಿ”

“ಭಕ್ತಿಯೇ ದೇವರನ್ನು ಒಲಿಸುವ ಪ್ರಧಾನ ಸಾಧನ”

ಮುಂತಾದ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಶ್ರೀಮದಾಚಾರ್ಯರು ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗಗಳ ಸಮನ್ವಯವನ್ನು ತೋರಿಸಿದ ತತ್ವಸಮನ್ವಯಾಚಾರ್ಯರು. ಬ್ರಹ್ಮಸೂತ್ರಗಳು, ಭಗವದ್ಗೀತೆ, ಮಹಾಭಾರತ, ರಾಮಾಯಣ, ಭಾಗವತಗಳ ಅರ್ಥವನ್ನು ವಿವರಿಸಲು ಅನೇಕ ಗ್ರಂಥಗಳನ್ನ ರಚಿಸಿದ ಅವರು ತುಂಬ ಸರಳವಾದ ಭಾಷೆಯಲ್ಲಿ ಗಹನವಾದ ತತ್ವಗಳನ್ನು ಅರ್ಥ ಮಾಡಿಸುತ್ತಾರೆ.

## ತತ್ವಗಳನ್ನು ನಿರ್ಣಯಿಸಲು ಆಚಾರ್ಯರು ತೋರಿಸಿದ ನಿರ್ದುಷ್ಟ ಮಾರ್ಗ

ಜಗತ್ತಿನಲ್ಲಿ ಹತ್ತಾರು ಧರ್ಮಗಳು, ನೂರಾರು ಸಿದ್ಧಾಂತಗಳು. ಯಾವುದನ್ನು ಒಪ್ಪಬೇಕು ಎನ್ನುವ ಗೊಂದಲ. ನಮ್ಮ ತಾರ್ಕಿಕತೆ, ವೈಚಾರಿಕತೆ ನಿರ್ಣಯ ಮಾಡದೇ ನಿಂತು ಬಿಡುತ್ತದೆ. ಹಾಗಾದರೆ ತತ್ವವನ್ನು ನಿರ್ಣಯಿಸುವದು ಹೇಗೆ? ಶ್ರೀಮದಾಚಾರ್ಯರು ಕೊಟ್ಟ ಉತ್ತರ — ನಿಮ್ಮ ವೈಚಾರಿಕ ಚರ್ಚೆಯಿಂದ ತಿಳಿದ ತತ್ವವನ್ನು ಅನುಭವದ ಒರೆಗಲ್ಲಿಗೆ ಹಚ್ಚಿ. ನಿಮ್ಮ ಅಂತಃಸಾಕ್ಷಿಯ ಅನುಭವದ ಮೇಲೆ ತತ್ವವನ್ನು ನಿರ್ಣಯಸಿ. ಅಂತಃಸಾಕ್ಷಿಯ ಅನುಭವ ಎಂದರೆ ನಂಬಿಕೆ ಅಲ್ಲ. ಶ್ರದ್ಧೆ ಅಲ್ಲ. ತತ್ವದ ಅನುಭೂತಿ. ಆ ಅನುಭೂತಿಗೆ ನಿಲುಕುವದೇ ತತ್ವ.

ತುಂಬ ಬಾಯಾರಿಕೆಯಾಗಿದೆ. ನೀರನ್ನು ಅರಸುತ್ತ ಹೊರಟಿರಿ. ದೂರದಲ್ಲೆಲ್ಲೋ ನೀರಿದೆ ತಿಳಿಯಿತು. ನಡೆಯುತ್ತ ಹೊರಟಿರಿ. ಬಿಸಿಲಿನ ಝಳಕ್ಕೆ ಬೀದಿಯಲ್ಲೇ ನೀರಿರುವ ಹಾಗೆ ಕಂಡಿತು. ಇರಬಹುದೇನೋ ಎಂದು ಹತ್ತಿರ ಹೋದಿರಿ. ಅದು

ಮರೀಚಿಕೆ ಎಂದು ಗೊತ್ತಾಯಿತು. ಇನ್ನೂ ನಡೆದಿರಿ. ಮತ್ತೆ ನೀರಿನಂತೆ ಕಂಡಿತು. ಹತ್ತಿರ ಹೋದಿರಿ. ಕಣ್ಣು ಇದು ನೀರು ಎಂದು ನಿರ್ಣಯಿಸಿತು. ಆದರೆ ಕಣ್ಣೂ ಸಹ ಕೈಕೊಟ್ಟಿದ್ದುಂಟು. ಹಗ್ಗವನ್ನು ನೋಡಿ ಹಾವು ಎಂದು ಭ್ರಮಿಸಿದ್ದುಂಟು. ಕಂಡದ್ದೆಲ್ಲ ಸತ್ಯವಾಗಿರಬೇಕಿಲ್ಲ. ದುರ್ಯೋಧನ ನೀರಿನಂತಹ ಪದಾರ್ಥ ನೋಡಿ ಪಂಚೆಯನ್ನೆತ್ತಿ ನಡೆದು ಅಪಹಾಸಕ್ಕೀಡಾಗಲಿಲ್ಲವೇ? ಹೀಗಾಗಿ ನಿಶ್ಚಯಿಸಿಕೊಳ್ಳಲು ನೀರನ್ನು ಮುಟ್ಟಿದಿರಿ. ಅದರ ತಂಪನೆಯ ಸ್ಪರ್ಶ ಇದು ನೀರು ಎನ್ನುವ ಜ್ಞಾನಕ್ಕೆ ಪುಷ್ಟಿ ನೀಡಿತು.  ಬೊಗಸೆ ಮಾಡಿ ನೀರು ಕುಡಿದಿರಿ. ತೃಪ್ತಿಯಾಯಿತು. ಈಗ ಜಗತ್ತಿನ ಅದ್ಯಾವುದೇ ವ್ಯಕ್ತಿ ಬಂದು ನೀವು ಕುಡಿದದ್ದು ನೀರಲ್ಲ ಎಂದು ವಾದಿಸಿದರೂ ನೀವು ಉತ್ತರ ನೀಡಬಲ್ಲಿರಿ. ಕಾರಣ, ನೀರು ಕುಡಿದು ಸುಖವನ್ನು ಅನುಭವಿಸಿದ್ದೀರಿ. ನೀರಿನ ಅನುಭವ ನಿಮಗೆ ಬಂದಾಗಿದೆ.

ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ, ತೊಗಲು ಆ ಐದು ಇಂದ್ರಿಯಗಳೂ ತಪ್ಪು ಜ್ಞಾನವನ್ನು ನೀಡಿವೆ. ಸರಿಯಾದದ್ದನ್ನೂ ನೀಡಿವೆ. ಆದರೆ ನಮ್ಮ ಅಂತಃಸಾಕ್ಷಿ ಮಾತ್ರ ಅರಿಯಬಹುದಾದ ಸುಖ

ಮತ್ತು ದುಃಖದ ವಿಷಯದಲ್ಲಿ ನಮಗೆಂದೂ ಮೋಸವಾಗಿಲ್ಲ. ಹಗ್ಗವನ್ನು ನೋಡಿ ಹಾವು ಎಂದು ತಿಳಿದಂತೆ ಖುಷಿಯಾದಾಗ ಆ ಖುಷಿಯನ್ನು ನೋವು ಎಂದು ಎಂದಿಗೂ ನಾವು ತಿಳಿದಿಲ್ಲ. ನಮಗೆ ನೋವಾದಾಗ ಆ ನೋವನ್ನು ಖುಷಿ ಎಂದು ಎಂದೂ ತಿಳಿದಿಲ್ಲ ನಾವು.  ಸುಖವನ್ನು ಸುಖ ಎಂದೇ ತಿಳಿದಿದ್ದೇವೆ. ನೋವನ್ನು ನೋವೆಂದೇ ತಿಳಿದಿದ್ದೇವೆ. ಆ ಅನುಭವದ ಒರೆಗಲ್ಲಿನಿಂದ ಎಲ್ಲ ತತ್ವಗಳನ್ನು ನಿರ್ಣಯಿಸಿ ಎಂದು ತತ್ವವನ್ನು ನಿರ್ಣಯಿಸುವ ಅಧಿಕಾರ ನಿಮ್ಮದೇ ಎಂದು ಅರುಹಿದ ಆಚಾರ್ಯಪುರುಷರು ನಮ್ಮ ಶ್ರೀಮದಾಚಾರ್ಯರು.

# ಯಶಸ್ಸಿನ ಮೂರು ಮೂಲಮಂತ್ರಗಳನ್ನು ಹೇಳಿಕೊಟ್ಟ ಆಚಾರ್ಯರು

ಆಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ ಎನ್ನುವ ಗ್ರಂಥದಲ್ಲಿ ಒಂದು ಮಾತಿದೆ —

> **ನಿಜಾನುಭಾವವರ್ಜಿತಾಃ**
> **ಹರೇರನುಗ್ರಹೋಜ್ಝಿತಾಃ ।**
> **ಮಹಾಪ್ರಯತ್ನವರ್ಜಿತಾ ಜನಾ ನ**
> **ಜಗ್ಮುರುನ್ನತಿಮ್ ॥**

ಲೌಕಿಕ ಜೀವನದ ಯಶಸ್ಸಾಗಲೀ, ಆಧ್ಯಾತ್ಮಿಕ ಜೀವನದ ಯಶಸ್ಸಾಗಲೀ ಎರಡಕ್ಕೂ ದಾರಿಯನ್ನು ತೋರಿಸುವ ದಾರಿದೀಪ ಆಚಾರ್ಯರ ಈ ನುಡಿ.

**ಆತ್ಮವಿಶ್ವಾಸ:** ಯಾವುದೇ ಸಾಹಸದ ಕಾರ್ಯವನ್ನು ಮಾಡುವ ಮುನ್ನ ಇದನ್ನು ಮಾಡಲು ನಾನು ಅರ್ಹನಾ? ಅದರಿಂದ ಪಡೆಯುವ ಫಲ ಪಡೆಯಲು ಅರ್ಹನಾ? ಎಂದು ನಾವು ನಿರ್ಧರಿಸಬೇಕು. ನಮ್ಮದೇ ಅನುಭವದ ಆಧಾರದ ಮೇಲೆ ನಾವೇ ನಿರ್ಧರಿಸಬೇಕು. ಈ ವಿಷಯದಲ್ಲಿ ಯಾರ

ಮಾತಿಗೂ ಬೆಲೆಕೊಡದೆ ನಮ್ಮ ಅಂತಃಸಾಕ್ಷಿಯ ಮಾತಿಗೆ ಮಾತ್ರ ಬೆಲೆ ಕೊಡಬೇಕು.

**ದೈವಾನುಗ್ರಹ:** ಸಾಹಸದ ಕಾರ್ಯದಲ್ಲಿ ವಿಘ್ನಗಳು ನೂರಾರು. ನಮ್ಮ ಪೌರುಷಕ್ಕೆ ನೀಗುವ ವಿಘ್ನವನ್ನು ಪರಿಹರಿಸಿಕೊಳ್ಳಬಹುದು. ಆದರೆ, ಪ್ರಕೃತಿ ಮತ್ತು ಪ್ರಕೃತಿವಿಕೋಪಗಳನ್ನು ನಿಯಂತ್ರಿಸುವದು ನಮ್ಮ ಕೈಯಲ್ಲಿಲ್ಲ. ಸಾವಿರಾರು ಜನರನ್ನು ಮದುವೆಗೆ ಆಹ್ವಾನಿಸಿ ನಾಳೆ ಮದುವೆ ಎನ್ನಬೇಕಾದರೆ ಮನೆಯಲ್ಲಿ ಸಾವಾದರೆ? ಅಂತಹ ವಿಘ್ನಗಳು ಬರಬಾರದು ಎಂದಾದಲ್ಲಿ ದೈವಾನುಗ್ರಹವಿರಬೇಕು. ಆ ಸಂದರ್ಭಕ್ಕೆ ಆ ಕೆಲಸವನ್ನು ಮಾಡುವ ನಿರ್ಣಯವನ್ನು ತೆಗೆದುಕೊಳ್ಳದಂತಾಗಬೇಕು. ಇದು ಒಳಗೆ ನಿಂತ ದೇವರ ಕೆಲಸ. ಹೀಗಾಗಿ ಕಾರ್ಯ ಆರಂಭಿಸುವ ಮುನ್ನ ದೇವರನ್ನು ವಿನಮ್ರವಾಗಿ ಪ್ರಾರ್ಥಿಸಿ ಮುಂದುವರೆಯಬೇಕು. ದೀನ ದಲಿತರಿಗೆ ನಾವು ಮಾಡುವ ಪರೋಪಕಾರ ಭಗವಂತನನ್ನು ಮೆಚ್ಚಿಸುವ ಶ್ರೇಷ್ಠ ಸಾಧನ ಎನ್ನುವದು ಶ್ರೀಮದಾಚಾರ್ಯರು ಖಚಿತ ನಿರ್ಣಯ.

**“ನಾನಾಜನಸ್ಯ ಶುಶ್ರೂಷಾ”**

**ಮಹಾಪ್ರಯತ್ನ:** ದೈವದ ಮೇಲೆ ಶ್ರದ್ಧೆಯಿಟ್ಟು ಪುರುಷಪ್ರಯತ್ನವನ್ನು ಬಿಡುವವನನ್ನು ಮೂರ್ಖ ಎಂದು ಕರೆದವರು ಶ್ರೀಮದಾಚಾರ್ಯರು. ಪುರುಷಪ್ರಯತ್ನಕ್ಕೆ ಅವರು ನೀಡಿದ್ದು ಮೊಟ್ಟ ಮೊದಲ ಸ್ಥಾನ. ನಾವು ಬ್ರಹ್ಮಪದವಿಯನ್ನು ಪಡೆಯಲು ಯೋಗ್ಯರಾಗಿದ್ದು, ಅದನ್ನು ಪಡೆಯಲು ಪೂರ್ಣ ಪ್ರಯತ್ನ ಮಾಡಿದಲ್ಲಿ ಪಡೆದೇ ಪಡೆಯುತ್ತೇವೆ. ನಾವು ಬ್ರಹ್ಮಪದವಿಯನ್ನು ಪಡೆಯಲು ಯೋಗ್ಯರಾಗಿದ್ದು ಪ್ರಯತ್ನ ಮಾಡದಿದ್ದಲ್ಲಿ ಎಂದಿಗೂ ಪಡೆಯಲು ಸಾಧ್ಯವಿಲ್ಲ ಎಂದು ಸಾರಿದ ಆಚಾರ್ಯರವರು. **"ವಿನಾ ಯತ್ನಂ ನ ಹರೋ ನಾಪಿ ಕರ್ಮ"** ನೀನು ಪ್ರಯತ್ನ ಪಡದಿದ್ದರೆ ನಿನ್ನ ಯೋಗ್ಯತೆ ಮತ್ತು ನೀನು ಮಾಡಿದ ದೇವರ ಪೂಜೆ ಎರಡೂ ಕೆಲಸವನ್ನೇ ಮಾಡುವದಿಲ್ಲ ಎನ್ನುತ್ತಾರೆ ಅವರು. "ಮಹಾಪ್ರಯತ್ನವನ್ನು ಮಾಡದವರು ಎಂದಿಗೂ ಉನ್ನತಿಯನ್ನು ಪಡೆಯುವದಿಲ್ಲ" ಎನ್ನುವದು ಅವರ ಖಡಾಖಂಡಿತ ನಿರ್ಣಯ.

ಹೀಗೆ "ದೃಢವಾದ ಆತ್ಮವಿಶ್ವಾಸ, ಗಟ್ಟಿಯಾದ ದೈವಾನುಗ್ರಹ, ಗುರಿ ಮುಟ್ಟುವವರೆಗೆ

ಸೋಲೊಪ್ಪದ ಮಹಾಪ್ರಯತ್ನ ಈ ಮೂರು ಇದ್ದಲ್ಲ ಯಶಸ್ಸು ಕಟ್ಟಿಟ್ಟ ಬುತ್ತಿ" ಎನ್ನುವ ಯಶೋಮಂತ್ರವನ್ನು ಕಲಿಸಿದವರು ಶ್ರೀ ಮಧ್ವಾಚಾರ್ಯರು. ನಾವು ನಮ್ಮ ಕಾರ್ಯದಲ್ಲಿ ಯಶಸ್ಸು ಪಡೆದಿಲ್ಲ ಎಂದಾದರೆ ಈ ಮೂರರಲ್ಲಿ ಒಂದಿಲ್ಲ ಎಂದೇ ಅರ್ಥ.

# ಕೌಟುಂಬಿಕ ನೆಮ್ಮದಿಗೆ ಶ್ರೀಮದಾಚಾರ್ಯರ ನಾಲ್ಕು ಸೂತ್ರಗಳು

ವ್ಯಕ್ತಿ ಶುದ್ಧನಾಗಿದ್ದಾಗ ಕುಟುಂಬ ಶುದ್ಧವಾಗಿರುತ್ತದೆ. ಕುಟುಂಬ ಶುದ್ಧವಾಗಿದ್ದಾಗ ಸಮಾಜ ಶುದ್ಧವಾಗಿರುತ್ತದೆ. ಸಮಾಜ ಶುದ್ಧವಾಗಿದ್ದಾಗ ರಾಜ್ಯ ರಾಷ್ಟ್ರಗಳು ಶುದ್ಧವಾಗಿ ಸಮೃದ್ಧಿಯಲ್ಲಿರುತ್ತವೆ ಎಂದು ಸಾರಿದವರು ಶ್ರೀ ಮಧ್ವಾಚಾರ್ಯರು. ನಮ್ಮ ಕೌಟುಂಬಿಕ ಜೀವನದ ನೆಮ್ಮದಿ ನೀಡುವ ನಾಲ್ಕು  ಸೂತ್ರಗಳನ್ನು ಆಚಾರ್ಯರು ಹೇಳಿಕೊಡುತ್ತಾರೆ.

## "ಸ್ಥಿರೋಽನುಭಾವ ಏವ ಮೇ"

**ನಿನ್ನನ್ನು ನೀನು ಗೌರವಿಸಿಕೋ:**  ನಮ್ಮನ್ನು ನಾವು ಗೌರವಿಸಿಕೊಳ್ಳಬೇಕಾದರೆ ಅಂತಹ ಕೆಲಸಗಳನ್ನೇ ನಾವು ಮಾಡಬೇಕು. ಹಿಂಸೆ, ಅಸೂಯೆ, ಕಾಮ, ಲೋಭ, ಮಾತ್ಸರ್ಯಗಳು ನಮ್ಮ ಬಗ್ಗೆಯೇ ನಮಗೆ ತಿರಸ್ಕಾರವನ್ನು ಹುಟ್ಟಿಸುತ್ತವೆ, ತಪ್ಪುದಾರಿಯಲ್ಲಿ ನಡೆಸುತ್ತವೆ.  ಪರೋಪಕಾರ, ಕರ್ತವ್ಯಪರತೆ, ಕಷ್ಟಸಹಿಷ್ಣುತೆ, ಮಾತು ಕೋಪಗಳ ಮೇಲಿನ

ಹಿಡಿತ, ಕಚ್ಚೆಯ ಬಿಗಿತ, ತಿಳುವಳಿಕೆ, ಮತ್ತೊಬ್ಬರ ಕಷ್ಟಕ್ಕೆ ಕರಗುವ ಮನಸ್ಸು ಮುಂತಾದ ಸದ್ಗುಣಗಳು ನಮ್ಮನ್ನು ನಾವು ಗೌರವಿಸಿಕೊಳ್ಳುವಂತೆ ಮಾಡುತ್ತವೆ. ನಮ್ಮ ಬಗ್ಗೆ ನಮಗೆ ಪ್ರೀತಿ ಮಾತ್ರ ಇದ್ದರೆ ಸ್ವಾರ್ಥ ಹೆಡೆಯೆತ್ತುತ್ತದೆ. ನಮ್ಮನ್ನು ನಾವು ಪ್ರೀತಿಸುವದರೊಂದಿಗೆ ಗೌರವಿಸಲು ಆರಂಭಿಸಿದರೆ ನಾವು ಸಜ್ಜನರಾಗಿಬಿಡುತ್ತೇವೆ, ನಮ್ಮ ಅಂತಃಸಾಕ್ಷಿ ನಮ್ಮನ್ನು ಗೌರವಿಸುವಂತೆ ಬದುಕಿಬಿಟ್ಟರೆ ಆ ಬದುಕು ಬಂಗಾರವಾಗಿಬಿಡುತ್ತದೆ.

## “ಜಾಯಾ ಸಖೀ”

**ನಿನ್ನ ಹೆಂಡತಿಯನ್ನು ಗೆಳತಿಯಂತೆ ಕಾಣು.**
ಪ್ರೀತಿಸುವ ಹೆಂಡತಿಯನ್ನು ಗುಲಾಮಳಂತೆ ಕಂಡಾಗ, ಮನೆಯನ್ನು ಚೊಕ್ಕವಾಗಿಟ್ಟು ಸಂಸಾರ ನಿಭಾಯಿಸುವ ಅವಳನ್ನು ಕೆಲಸಕ್ಕೆ ಬಾರದವಳಂತೆ ಕಂಡಾಗ, ನಮಗಾಗಿ ಪ್ರಾಣವನ್ನೇ ನೀಡುವ ಅವಳಿಗೆ ಬೆಲೆಯನ್ನೇ ನೀಡದಾಗ ದಾಂಪತ್ಯ ಹಾಳಾದಂತೆಯೇ. ಹೆಂಡತಿ ಅಂದರೆ ಜೀವದ ಗೆಳತಿ. ಅವಳನ್ನು ಪ್ರೇಮದ ಗೆಳತಿಯನ್ನಾಗಿ ಕಂಡರೆ ದಾಂಪತ್ಯದ ಎಲ್ಲ

ಸಮಸ್ಯೆಗಳೂ ಬಗೆ ಹರಿದುಬಿಡುತ್ತವೆ. ಮುಂದೆ ನಿಂತ ಅದೆಂತಹ ಕಷ್ಟದ ಬೆಟ್ಟವನ್ನೂ ಕುಟ್ಟಿ ಪುಡಿ ಮಾಡಿಬಿಡುತ್ತೇವೆ. ಅಂತಹ ಗುಣವತಿಯನ್ನು ಮದುವೆಯಾಗಬೇಕು. ಆ ಹೆಂಡತಿಯನ್ನು ಗೆಳತಿಯನ್ನಾಗಿಯೇ ಕಾಣಬೇಕು.

## "ಕನ್ಯಾ ಕುಲದ್ವಯತಾರಿಣೀ"

**"ಮಗಳೆಂಬ ಸೌಭಾಗ್ಯ"** ಮದುವೆಯ ಸಾರ್ಥಕತೆ ಅಡಗಿರುವದೇ ನಾವು ಪಡೆಯುವ ಮಕ್ಕಳಲ್ಲಿ. ಆ ಮಕ್ಕಳು ಬದುಕುವ ಬಗೆಯಲ್ಲಿ. ಅವರು ಪಡೆಯುವ ಯಶಸ್ಸಿನಲ್ಲಿ. ಹೆಣ್ಣು ಮಗಳನ್ನು ಎಂದಿಗೂ ಕಡೆಗಣಿಸಬೇಡ. ಹುಟ್ಟಿದ ಮನೆಯನ್ನೂ ಮೆಟ್ಟಿದ ಮನೆಯನ್ನೂ ಬೆಳಗುವ ಹಣತೆ ಅವಳು. ಮಗ ಕುಲೋದ್ಧಾರಕ. ಆದರೆ ಮಗಳು ಎರಡು ಕುಲದ ಉದ್ಧಾರಕಳು! "ಕುಲದ್ವಯತಾರಿಣೀ" ಹೇಗೆ ಗಂಡಸಾದವನು ಎಂದಿಗೂ ತಾನೊಂದು ಮಗುವನ್ನು ಹಡೆಯಲಾರ, ಆ ತಾಯ್ತನದ ಸೌಭಾಗ್ಯವನ್ನು ಪಡೆಯಲಾರ, ಅನುಭವಿಸಲಾರ ಹಾಗೆ ಹೆಣ್ಣಿನ ಈ ಗುಣವನ್ನೂ ಎಂದಿಗೂ ಪಡೆಯಲಾರ. ಹುಟ್ಟಿದ ಮನೆಯಲ್ಲಿ ನಲಿವು

ಸಂಭ್ರಮಗಳ ಚಿಲುಮೆಯನ್ನು ಮೂಡಿಸುವ ಮಗಳು ಮೆಟ್ಟಿದ ಮನೆಯಲ್ಲಿ ಸುಖ ಸಂತೋಷಗಳ ನದಿಯನ್ನೇಹರಿಸುತ್ತಾಳೆ. ಹುಟ್ಟಿದ ಹೆಣ್ಣುಕೂಸನ್ನು ಆ ರೀತಿ ರೂಪಿಸುವ, ಅವಳನ್ನು ಅಕ್ಕರೆಯಿಂದ ಪ್ರೀತಿಸುವ ಮನೆಯೇ ನಿಜವಾದ ಮನೆ.

### "ಸುತಃ ಆತ್ಮೈವ"

**ನಿನ್ನ ಮಗ ನಿನ್ನ ಪ್ರತಿಬಿಂಬ.** ನಮ್ಮ ಮಗ ನಮ್ಮ ಮತ್ತು ನಮ್ಮ ಪೂರ್ವಜರ ಪ್ರತೀಕ. ಅವನ ಉನ್ನತಿ ಅವನತಿಗಳು ನಮ್ಮ ಮತ್ತು ನಮ್ಮ ಪೂರ್ವಜರ ಉನ್ನತಿ ಅವನತಿಗಳು. ನಮ್ಮ ಪೂರ್ವಜರು ನಮಗೆ ಕಲಿಸಿದ ಬದುಕಿನ ದಿವ್ಯಪಾಠಗಳನ್ನು ನಮ್ಮ ಮಗನಿಗೆ ಕಲಿಸಿ ಅವನನ್ನು ಸತ್ಪ್ರಜೆಯನ್ನಾಗಿ, ಸಜ್ಜನನ್ನಾಗಿ ರೂಪಿಸುವ ಹೊಣೆ ನಮ್ಮದು.

**ಪತಿತಸ್ಯಾಸ್ಯ ದೇಹಸ್ಯ**
**ಕಾಷ್ಠವಿಷ್ಠಾಸಮಸ್ಯ ಚ ।**
**ಫಲಾನಿ ತ್ರೀಣಿ ಶಿಷ್ಯಂತೇ**
**ವಿದ್ಯಾ ಕರ್ಮ ಸುತಾ ಇತಿ ।**

ಒಂದಲ್ಲ ಒಂದು ದಿವಸ ಮಣ್ಣಾಗಿ ಹೋಗುವ ನಮ್ಮ ನಶ್ವರ ಬದುಕಿನ ಶಾಶ್ವತ ಫಲಗಳು ಮೂರು. ಒಂದು, ನಾವು ನಾವು ಸಂಪಾದಿಸುವ ಆಧ್ಯಾತ್ಮಿಕ ವಿದ್ಯೆ. ಎರಡು, ನಾವು ಮಾಡುವ ಸತ್ಕರ್ಮಗಳು. ಮೂರು, ನಮ್ಮ ಪ್ರತಿಬಿಂಬವಾದ ನಮ್ಮ ಸಂತಾನ. ತಿಳುವಳಿಕೆ ಪಡೆಯದೇ, ಸತ್ಕರ್ಮಗಳನ್ನು ಮಾಡದೇ, ಸಂತಾನವನ್ನು ಸತ್ಸಂತಾನವನ್ನಾಗಿ ರೂಪಿಸದೇ ಬದುಕುವ ಬದುಕಿಗೆ ಅರ್ಥವೇ ಇಲ್ಲ ಎನ್ನುತ್ತಾರೆ ಆಚಾರ್ಯರು.

ಅದೆಂಥ ಅದ್ಭುತ ಉಪದೇಶಗಳಿವು! ನಮ್ಮನ್ನು ನಾವು ಗೌರವಿಸುವಂತೆ ಬದುಕುವ, ನಮ್ಮ ಪ್ರೀತಿಯ ಜನರನ್ನು ಗೌರವಿಸಿ ಬದುಕುವ, ನಮ್ಮ ಸಂತಾನದ ಮುಖಾಂತರ ಚಿರಂಜೀವಿಗಳಾಗುವ, ಸಮೃದ್ಧವಾದ ಕೌಟುಂಬಿಕ ನೆಮ್ಮದಿಯನ್ನು ತಂದು ನೀಡುವ ದಿವ್ಯಸೂತ್ರಗಳಿವು. ಪ್ರತಿಯೊಬ್ಬ ಮನುಷ್ಯ ತನ್ನ ಜೀವನದಲ್ಲಿ ಇವನ್ನು ಅಳವಡಿಸಿಕೊಂಡನಾದರೆ ಅವನ ಜೀವನ ಸುಖಮಯವಾಗುತ್ತದೆ. ಪ್ರತಿಯೊಬ್ಬ ಮನುಷ್ಯ ಸುಖಿಯಾದರೆ ರಾಜ್ಯ ರಾಷ್ಟ್ರಗಳು ಸಮೃದ್ಧವಾಗುತ್ತವೆ.

ಇಂತಹ ಸಾವಿರಾರು ನೀತಿಗಳನ್ನು ಉಪದೇಶಿಸಿ ನಮ್ಮ ಕರ್ನಾಟಕದ ತುಳುನಾಡಿನ ಪಾಜಕದಲ್ಲಿ ಅವತರಿಸಿ ಇಡಿಯ ಜಗತ್ತಿಗೇ ಬೆಳಕಾದ ಶ್ರೀಮದಾಚಾರ್ಯರು ವ್ಯಾಸಬದರಿಗೆ ತೆರಳಿದ ಈ ಪವಿತ್ರ ಮಧ್ವನವಮಿಯ ಸಂದರ್ಭದಲ್ಲಿ ಅವರನ್ನು ನೆನೆದು ಕೃತಾರ್ಥರಾಗೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491